# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **101**

ಸದಸ್ಯರ ಹೆಸರು : ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 11-08-2025

ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ Occupation ಪತ್ರ ಮತ್ತು ಪೂರ್ಣಗೊಂಡ ಪ್ರಮಾಣ ಪತ್ರ ಪಡೆಯದೇ ಇರುವ ಲಕ್ಷಾಂತರ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಾನ್ಯ ಘನ ಸರ್ವೋಚ್ಚ ನ್ಯಾಯಾಲಯ ಆದೇಶ ಹೊರಡಿಸಿರುವ ದಿನಾಂಕ: 17.12.2024 ರಿಂದ, ವಿದ್ಯುತ್ ಸರಬರಾಜು ಕಂಪನಿಗಳು ಹೊಸ ಶಾಶ್ವತ ವಿದ್ಯುತ್ ಸಂಪರ್ಕ ಬಯಸುವ ಗ್ರಾಹಕರಿಗೆ, ಸದರಿ ಕಟ್ಟಡಕ್ಕೆ ಸಂಬಂಧಿಸಿದಂತೆ ಸಕ್ಷಮ/ಸ್ಥಳೀಯ ಪ್ರಾಧಿಕಾರ ನೀಡಲ್ಪಟ್ಟ ವಾಸಯೋಗ್ಯ/ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.<br><br>ಅರ್ಜಿದಾರರು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ), ಕರ್ನಾಟಕ ಸರ್ಕಾರ ಮತ್ತು ನ್ಯಾಯಾಲಯದ ಆದೇಶಗಳಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸಿದಲ್ಲಿ, ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ವಿದ್ಯುತ್ ಸಂಪರ್ಕ ನೀಡಲಾಗುವುದು.<br><br>ಮಾನ್ಯ ಘನ ಸರ್ವೋಚ್ಚ ನ್ಯಾಯಾಲಯದ ಆದೇಶವು ಆದೇಶಿತ ದಿನಾಂಕದಿಂದಲೇ ಜಾರಿಯಾಗಿರುವುದರಿಂದ. ಯಾವುದೇ ವಿಧದ ವ್ಯತ್ಯಾಸ/ಅಂತರವಿಲ್ಲದೆ ಎಲ್ಲಾ ಅರ್ಜಿದಾರರಿಗೂ ಈ ಆದೇಶವು ಅನ್ವಯವಾಗುತ್ತದೆ. |
| ಆ) | ಬಂದಿದ್ದಲ್ಲಿ, ಯಾವ ಕಾರಣಕ್ಕೆ ಸಂಪರ್ಕವನ್ನು ನೀಡಲು ಸರ್ಕಾರ ನಿರಾಕರಿಸಲಾಗುತ್ತಿದೆ; | |
| ಇ) | ಈಗಾಗಲೇ ಪೂರ್ಣಗೊಂಡಿರುವ ಪ್ರಗತಿ ಹಂತದಲ್ಲಿರುವ ಮನೆಗಳಿಗೆ ವಿದ್ಯುತ್ ಮತ್ತು ನೀರಿನ ಸಂಪರ್ಕ ಕಲ್ಪಿಸದಿದ್ದಲ್ಲಿ ಅವರುಗಳಿಗೆ ನ್ಯಾಯ ಒದಗಿಸುವುದು ಹೇಗೆ; | |
| ಈ) | ರೈತರ ಜಮೀನುಗಳಿಗೆ ಅಕ್ರಮ ಸಕ್ರಮ ಯೋಜನೆಯಡಿ ವಿದ್ಯುತ್ ಪರಿವರ್ತಕ ಅಳವಡಿಸುವ ಬಗ್ಗೆ ಚಿತ್ರದುರ್ಗ ಜಿಲ್ಲೆ ಹಿರಿಯೂರು ವಿಭಾಗದಲ್ಲಿ ಒಟ್ಟಾರೆ ಅರ್ಜಿಗಳಲ್ಲಿ ಎಷ್ಟು ಟಿ.ಸಿ. ಅಳವಡಿಸಲಾಗಿದೆ; ಬಾಕಿಯಿರುವ ಅರ್ಜಿಗಳ ಬಗ್ಗೆ ಸರ್ಕಾರ, ಕ್ರಮ ಕೈಗೊಂಡಿದೆಯೇ; ಮಾಹಿತಿ ಒದಗಿಸುವುದು? | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿ ಚಿತ್ರದುರ್ಗ ಜಿಲ್ಲೆ ಹಿರಿಯೂರು ವಿಭಾಗದಲ್ಲಿ 18,208 ಸಂಖ್ಯೆಯ (ರೂ.10,000/- ಹಾಗೂ ಇತರೆ ಶುಲ್ಕ ಪಾವತಿಸಿರುವ) ರೈತರ ಪಂಪ್‌ಸೆಟ್‌ಗಳಿಗೆ ಅಕ್ರಮ ಸಕ್ರಮ ಯೋಜನೆಯಡಿ ವಿದ್ಯುತ್ ಸಂಪರ್ಕ ಪಡೆಯಲು ಅರ್ಜಿಗಳು ಸ್ವಿಕೃತಗೊಂಡಿರುತ್ತದೆ.<br><br>ಜೂನ್-2025 ರ ಅಂತ್ಯಕ್ಕೆ ಹಿರಿಯೂರು ವಿಭಾಗದಲ್ಲಿ 14,740 ಪಂಪ್ ಸೆಟ್‌ಗಳಿಗೆ 11,062 ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ.<br><br>ಬಾಕಿ ಯಿರುವ 3,468 ಪಂಪ್ ಸೆಟ್ ಗಳ ಪೈಕಿ, 866 ಪಂಪ್ ಸೆಟ್‌ಗಳಿಗೆ ಚಾಲ್ತಿಯಲ್ಲಿರುವ ಕಾರ್ಯಾದೇಶದಲ್ಲಿ (D.W.A) ಶೀಘ್ರವಾಗಿ ವಿದ್ಯುತ್ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಉಳಿದ 2602 ಅರ್ಜಿಗಳಿಗೆ (ರೂ.10,000 ಹಾಗೂ ಇತರೆ ಶುಲ್ಕ ಪಾವತಿಸಿರುವ) ವಿದ್ಯುತ್ ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿಗೆ ದಿನಾಂಕ:04.07.2025 ರಂದು ಟೆಂಡರ್ ಆಹ್ವಾನಿಸಲಾಗಿದ್ದು ಆರ್ಥಿಕ ವರ್ಷ 2025-26 ರಲ್ಲಿ ಪೂರ್ಣಗೊಳಿಸಲು ಕ್ರಮ ವಹಿಸಲಾಗಿದೆ. |

ಸಂಖ್ಯೆ: ಎನರ್ಜಿ 155 ಇಬಿಎಸ್ 2025

(ಕೆ.ಜೆ.ಜಾರ್ಜ್) 7/8/25

ಇಂಧನ ಸಚಿವರು